ಬೇರೆ ಕಡೆ ನೇಮಿಸುವುದು ಮತ್ತು ಈಗ ಉಪ ವಿಭಾಗಾಧಿಕಾರಿಗಳು ಚಲಾಯಿಸುತ್ತಿರುವ ಅಧಿಕಾರಿಗಳನ್ನು ತಹಶೀಲ್ದಾರರು ದರ್ಜೆ-1 ಇವರಿಗೆ ನೀಡುವುದು. ಇದು ಸ್ವಾಗತಾರ್ಹವಾದ ವಿಚಾರ. ಅದೇ ರೀತಿಯಲ್ಲಿ ತೆರಿಗೆ ವಿಧಿಸುವಲ್ಲಿ ಕೂಡ ಚೆನ್ನಾಗಿ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಮೊದಲಿನಿಂದಲೂ ಸಮಾಜವಾದಿ ನಂ. ಇಂದು ಸಮಾಜವಾದದ ಬಾಸನ ಬೇರೆ ಬೇರೆ ಕಡೆಗಳಲ್ಲಿ ಕಾಣುತ್ತಿದೆ. ಸಮಾಜವಾದದ ಕಂಪನ್ನು ಬೇರೆ ಬೇರೆ ಕಡೆಗಳಲ್ಲಿ ನೋಡುತ್ತಿದ್ದೇವೆ. ಇದರಲ್ಲಿ ಅನೇಕ ವಸ್ತುಗಳಿಗೆ ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ. ಛತ್ರ, ಅಕ್ಕಿ, ಮೀನು, ಕೋಳಿ ಗೊಬ್ಬರ, ಜೈವಿಕ ಗೊಬ್ಬರ ಸ್ಪೇಯರ್ ಪಾರ್ಟ್ಸ್ ಭಾಗಗಳು-ಉಪಭಾಗಗಳು ಇತ್ಯಾದಿ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡಿದ್ದಾರೆ ಇದು ಪ್ರಾಮುಖ್ಯವಾದ ವಿಚಾರ. "ಕಬ್ಬಿಗೆ ಕೊಡಬೇಕಾಗಿರುವ ವಿರೀದಿ ತೆರಿಗೆ ಕಾರಣದಿಂದಾಗಿ ಕರ್ನಾಟಕ ರಾಜ್ಯದ ಹೊರಗಡೆ ಇರುವ ಸಕ್ಕರೆ ಕಾರ್ಖಾನೆಗಳಿಗೆ ತಾವು ಬೆಳೆದ ಹೆಚ್ಚುವರಿ ಕಬ್ಬಿನ ಬೆಳೆಯನ್ನು ವಿಲೆ ಮಾಡಲು ಆಗುತ್ತಿಲ್ಲವೆಂದು ಮೈಸೂರು, ಮಂಡ್ಯ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಕಬ್ಬು ಬೆಳೆಯುತ್ತಿರುವ ರೈತರಿಂದ ನನಗೆ ಹಲವಾರು ಮನವಿಗಳು ಬಂದಿವೆ. ಹೀಗೆ ರೈತರಿಗೆ ಪರಿಹಾರ ಕ್ರಮವಾಗಿ ರಫ್ತು ಉದ್ದೇಶಕ್ಕಾಗಿ ಮಾತ್ರವೇ ಇರುವ ಕಬ್ಬಿನ ಮೇಲಿನ ವಿರೀದಿ ತೆರಿಗೆ ವಿನಾಯಿತಿ ನೀಡಲು ಉದ್ದೇಶಿಸಿದ್ದೇನೆ." ಎಂದು ಹೇಳಿದ್ದಾರೆ.

ಉಪಾಧ್ಯಕ್ಷೀಣಿಯವರು- ಆದನ್ನೆಲ್ಲ ಅರ್ಥ ಸಚಿವರು ಓದಿದ್ದಾರೆ. ನೀವು ಏನಾದರೂ ಇದ್ದರೆ ಹೇಳಿ. ಈಗಾಗಲೇ ಒಂದು ಗಂಟೆ ತೆಗೆದುಕೊಂಡಿದ್ದೀರಿ, ಇನ್ನು 5 ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ. ಎಂ. ಇದಿನಬ್ಬ- ಇದು ಬಹಳ ಉಪಯುಕ್ತವಾದುದು. ಪ್ರತಿಯೊಂದು ವಸ್ತುವಿನ ಮೇಲೂ ತೆರಿಗೆ ಇತ್ತು. ಆ ತೆರಿಗೆಯನ್ನು ರದ್ದು ಮಾಡಿದ್ದೇವೆಂದು ಹೇಳುವುದು ಒಳ್ಳೆಯ ಕಾರ್ಯಕ್ರಮ. ಆ ಪ್ರಕಾರ ಬಜೆಟ್ಟಿನಲ್ಲಿ ಸೂಚಿಸಿ ವಿನಾಯಿತಿ ನೀಡಿಬ್ಬಿದೆ. ಟೀಕೆ ಮಾಡುವವರು ಇದನ್ನೆಲ್ಲ ಹೇಳುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. 'ಅದರಕ್ಕೆ ಕಹಿಯಾದರೆ ಉದರಕ್ಕೆ ಸಿಹಿ' ನಾನು ಹೇಳುವುದು. ಅಂಥ ವಿಚಾರಗಳನ್ನು ಹೇಳುತ್ತಿದ್ದೇನೆ. ಟೀಕೆ ಮಾಡುವವರು, ಒಬ್ಬರ ಗಂಟಲಿಗೆ ಮೊಸರಲ್ಲಿ ಕಲ್ಲು ಬಿಗುವ ಹಾಗೆ ತಪ್ಪುಗಳನ್ನು ಹುಡುಕುತ್ತಾರೆ. ಬಜೆಟ್ಟಿನಲ್ಲಿ ಇದ್ದುದನ್ನು ಈ ಜೇಬಿಕ್ಕೆ ಸುಡಿಗೆ ಆಗತಕ್ಕ ನ್ಯಾಯವನ್ನು, ಸತ್ಯವನ್ನು ಹೇಳುತ್ತಿಲ್ಲವೆ ನೆತ್ರವಾದುದರಿಂದ ಇದುದ್ದು ಇದ್ದಹಾಗೆ ಹೇಳಿರುವುದರಿಂದ ನಿರಾಶೆ ಎಂದು ಕಾಣಿರೂ ಅದು ಬಹಳ ಪವಿತ್ರವಾದುದು ಎಂದು ಹೇಳುತ್ತಿದ್ದೇನೆ. ಅನೇಕ ವಸ್ತುಗಳಿಗೆ ಇಪತ್ತಿನ ದಿನಸ ತೆರಿಗೆಯಿಂದ ವಿನಾಯಿತಿ ನೀಡಿದ್ದಾರೆ ಎಳನೀರು, ಮೊಬಿಟ್ಟಿ ಇತ್ಯಾದಿ ವಸ್ತುಗಳಿಗೆಲ್ಲ ತೆರಿಗೆ ಕಡಿಮೆ ಮಾಡಿದ್ದಾರೆ. ಇದೆಲ್ಲ ಪುಸ್ತಕದಲ್ಲಿದ್ದರೂ ಹೇಳಬೇಕಲ್ಲ. ಇಲ್ಲದಿದ್ದರೆ ಯಾವುದಕ್ಕೆ ಕಡಿಮೆ ಮಾಡಿದ್ದಾರೆಂದು ಗೊತ್ತಾಗುವುದು ಹೇಗೆ?

1.15 ಪಿ.ಎಂ.

ಇದು ಜನತೆಗೆ ಗೊತ್ತಾಗಬೇಕು. ಈ ಪುಸ್ತಕ ಜನತೆಗೆ ಮೋಗುಸುರಿಲ್ಲ ತಮ್ಮ ಅಪ್ಪಣೆ ಪಡೆದು ನಾನು ಮಾತನಾಡುತ್ತೇನೆ. ಜನರಿಗೆ ಈ ವಿಷಯ ಗೊತ್ತಾಗಲಿ. ಮೂಲೆ ಮೂಲೆಗೆ ಗೊತ್ತಾಗಲಿ. ಎಳನೀರು, ಮೊಂಬತ್ತಿ, ಕೃಷಿಗಳ ಕಾರ್ಪೆಟ್‌ಗಳು, ಕನ್ನಡಕಗಳು ಬಾಲ್‌ಪಾಯಿಂಟ್ ಪೆನ್ ರೀಫಿಲ್‌ಗಳು ಇಂಥ ಅನೇಕ ವಸ್ತುಗಳಿಗೆ ರಿಯಾಯಿತಿ ಮಾಡಿದ್ದಾರೆ. ಅದೇ ರೀತಿಯಲ್ಲಿ ಮಾರ್ಪಾಡು ಮಾಡಿದ್ದಾರೆ. ಅದೇ ರೀತಿಯಲ್ಲಿ ಕನ್ನಡದಲ್ಲಿ ಕುಮಾರ ಪಂಥ ದೊಡ್ಡ ದೊಡ್ಡ ಮನುಷ್ಯರ ಹುಟ್ಟು ಸಳಗಳನ್ನು ಒಳ್ಳೆಯ ಸ್ಮಾರಕವಾಗಿ ಮಾಡಬೇಕೆಂದು ಕೂಡ ಇದರಲ್ಲಿ ಹೇಳಿದ್ದಾರೆ. ಆದ್ದರಿಂದ ಈ ರೀತಿಯಲ್ಲಿ ಈ ರಿಯ ಬಜೆಟ್ 125 ಪುಟಗಳ ತಾಗಾಧಮಾದ ದೊಡ್ಡ ಗ್ರಂಥದಹಾಗೆ ಇರತಕ್ಕ ಈ ಭಾಷಣ ಜನಸಾಮಾನ್ಯರಿಗೆ ನಿಜವಾ ಯೂ ಯಾವರೀತಿಯ ತೊಂದರೆಯನ್ನು ಮಾಡದೆ ಉಪಕಾರವನ್ನು ಮಾಡಿದೆ. ಮತ್ತು ತನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ನಾಡಿಗೆ ವಿಶ್ವ, ಆರಾಧನ, ಅಕ್ಷರ ಇಂಥ ಕಾರ್ಯಕ್ರಮಗಳಿಂದ ಇನ್ನು ಎರಡು ಮೂರು ವರ್ಷಗಳಲ್ಲಿ ಒಳ್ಳೆಯ ಫಲ ಸಿಗತಕ್ಕ ವ್ಯವಸ್ಥೆಯನ್ನು ಬಜೆಟ್‌ನಲ್ಲಿ ಮಾಡಿದ್ದಾರೆ. ಆದ್ದರಿಂದ ಈ ಬಜೆಟ್ ಒಂದು ಅಭಿವೃದ್ಧಿಪರವಾದ ಬಜೆಟ್. ಇದರಿಂದ ನಾವು ಒಳ್ಳೆಯದನ್ನು ಅಪೇಕ್ಷಿಸಬಹುದು ಎಂದು ಹೇಳಿ ಇಂಥ ಒಂದು ಒಳ್ಳೆಯ ನಾನು ಮೊದಲೇ ಹೇಳಿದೆ ಸಮಾಜವಾದಿ ರೂಪವಲ್ಲಿ ಒಂದು ರೀತಿಯ ಸುವಾಸನೆ ಕೊಡತಕ್ಕ ಬಜೆಟ್ ಎಂದು. ಇನ್ನು ಭೂತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ನಿ. ಮಲ್ಲಿಕಾರ್ಜುನಪ್ಪ:-(ಅದ್ಯಕ್ಷರು, ಸಭೆಯ ಮುಂದಿಡಲಾದ ಕಾಗದಪತ್ರಗಳ ಸಮಿತಿಯ ಸಮಿತಿ)

ಸಭಾಧ್ಯಕ್ಷರೆ, ಸಭೆಯ ಮುಂದಿದ್ದಲಾದ ಕಾಗದಪತ್ರಗಳ ಪರಿಶೀಲನಾ ಸಮಿತಿಯ 10ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:- ಸಭೆಯ ಮಂದಿಡಲಾಗಿದೆ. ಈಗ ಡಾಕ್ಟರ್ ನುಜಪ್ಪನವರೇ ತಾವು ಮಾತನಾಡಿ.

1992-93 ನೇ ಸಾಲಿನ ಆಯನ್ಯಯದ ಮೇಲಿನ ಸಾಮಾನ್ಯ ಚರ್ಚೆ

ಡಾಕ್ಟರ್ ಎನ್. ಬಿ. ನಂಜಪ್ಪ:-(ಶ್ರವಣಬೆಳಗೊಳ)

ಮಾನ್ಯ ಅಧ್ಯಕ್ಷೆಣೆಯವರೆ, 1992-93 ನೇ ಆಯವ್ಯಯ ಪತ್ರದ ಮಂಡನೆ ಆದಮೇಲೆ ಪ್ರಪ್ರಥಮವಾಗಿ ಮಾನ್ಯ ಮಿತ್ರರಾದ ಇಬನಬ್ಬ ಅವರು ಪ್ರಾರಂಭ ಮಾಡಿ 1992-93 ನೇ ಆಯವ್ಯಯದ ವಿಶ್ಲೇಷಣೆಗಳು ಹೇಗಿದೆ, ಇದರಲ್ಲಿ ಜನತೆಗೆ, ಕರ್ನಾಟಕ ರಾಜ್ಯದ ಜನತೆಗೆ ಅನುಕೂಲವಾಗುತ್ತದೆಯೇ, ಕರ್ನಾಟಕ ರಾಜ್ಯದ ಆರ್ಥಿಕ ಮುನ್ನಡೆಗೆ ಈ ವರ್ಷದ ಈ ಆಯವ್ಯಯ ಪತ್ರ ಸಹಾಯ ಮಾಡುತ್ತದೆಯೇ ಎನ್ನುವುದರ ಬಗ್ಗೆ ನಾವುಗಳು ಚಿಂತನೆ ಮಾಡಬೇಕಾಗಿದೆ. ಈ ಚಿಂತನೆ ಮಾಡತಕ್ಕ ಸಮಯದಲ್ಲಿ ಇದರಲ್ಲಿ ಅಡಗಿರತಕ್ಕ ಒಡಲ ಮುಖ್ಯ ಅಂಶಗಳು ಯಾವುವು ಇದನ್ನು ಆಯವ್ಯಯ ಪತ್ರ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಆರ್ಥಿಕ ಮಂತ್ರಿಗಳು ನಿಜವಾಗಿಯೂ ಕರ್ನಾಟಕ ರಾಜ್ಯದ ಬಹುಮುಖ್ಯವಾಗಿ ಇರತಕ್ಕ ಸಮಸ್ಯೆಗಳಿಗೆ ಹೆಚ್ಚಿಗೆ ಗಮನವನ್ನು ಹರಿಸಿದ್ದಾರೆಯೇ ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕಾಗಿದೆ. ಇದನ್ನು ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷೆಣೆಯವರೆ, 1992-93 ನೇ ವರ್ಷದ ನಲುಯವಾರು ರಾಜ್ಯದ ಯೋಜನೆ ಪಂಚಿಕೆಯಲ್ಲಿ ನಾವು ಗಮನವನ್ನು ಹರಿಸಿದಾಗ ಮೊದಲನೇ ಸ್ಥಾಮುಖ್ಯತೆಯನ್ನು ವಿದ್ಯುಚ್ಛಕ್ತಿಗೆ ಕೊಟ್ಟಿದ್ದಾರೆ. ಒಟ್ಟು ಬಾಬ್ತಿನ 22.95 ಪರ್ಸೆಂಟೇಜನ್ನು ಇದಕ್ಕೆ ಕೊಟ್ಟು 495 ಕೋಟಿ 57 ಲಕ್ಷ ರೂಪಾಯಿಗಳನ್ನು ವಿದ್ಯುಚ್ಛಕ್ತಿಗೆ ಕೊಟ್ಟಿದ್ದಾರೆ. ಅದೇ ರೀತಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ 2 ನೇ ಸ್ಥಾನವನ್ನು ಕೊಟ್ಟಿದ್ದಾರೆ. 3ನೇ ಸ್ಥಾನವನ್ನು ನೀರು ಸರಬರಾಜು ಮತ್ತು ಪಸತಿ, ನಗರಾಭಿವೃದ್ಧಿಗೆ ಕೊಟ್ಟಿದ್ದಾರೆ. 4ನೇ ಸ್ಥಾನವನ್ನು ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಸೇವೆಗಳಿಗೆ ಕೊಟ್ಟಿದ್ದಾರೆ. ಇಂದ ಮೇಲೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಇರತಕ್ಕ ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ಅರ್ಥ ಮಂತ್ರಿಗಳು ಸನಿಯಾಗಿ ಅರ್ಥ ಮಾಡಿಕೊಂಡಿದ್ದಾರೆ. ಇವತ್ತು ಬಹಳ ಮುಖ್ಯವಾಗಿ ವಿದ್ಯುತ್ ಅಭಾವದಿಂದ ಎಷ್ಟು ತೊಂದರೆಯಾಗಿದೆ, ವ್ಯವಸಾಯಕ್ಕೆ ಎಷ್ಟು ತೊಂದರೆಯಾಗಿದೆ, ಕೃಷಿಗೆ ಎಷ್ಟು ತೊಂದರೆಯಾಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಉತ್ಪತ್ತಿ ಆಗತಕ್ಕ ಆಹಾರ ಮತ್ತು ಕಾರ್ಖಾನೆಗಳಿಂದ ಹೊರಬರತಕ್ಕ ಸಾಮಾನುಗಳಿಗೆ ಹೇಗೆ ತೊಂದರೆಯಾಗಿದೆ, ಅದರಲ್ಲೂ ಬಹಳಷ್ಟು ತೊಂದರೆ ಆಗುವುದರ ಜೊತೆಗೆ ಅದರ ಸರ್ವನಾಶ ಆಗತಕ್ಕ ಒಂದು ಸ್ಥಿತಿಯನ್ನು ಮುಟ್ಟಿದ್ದೇವೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇದನ್ನು ಯೋಚನೆ ಮಾಡಿದಾಗ ಮಾನ್ಯ ಅಧ್ಯಕ್ಷೆಣೆಯವರೇ ಕೈಗಾರಿಕೆ ಬಗ್ಗೆ ಈ ಸದನದಲ್ಲಿ ಮಾನ್ಯ ಸದಸ್ಯರು ಎಲ್ಲರೂ ಚರ್ಚೆ ಮಾಡಿದ್ದಾರೆ. ಕೈಗಾರಿಕೆಯಲ್ಲಿ ಒಟ್ಟು ಉತ್ಪಾದನೆ ಕಳೆದ 7-8 ವರ್ಷಗಳ ಹಿಂದು ಎಷ್ಟು ಇತ್ತೋ ಅಷ್ಟೇ ಉತ್ಪಾದನೆಯಲ್ಲಿ ಸ್ಥಗಿತಗೊಂಡಿದ್ದು ಅಷ್ಟೇ ಉತ್ಪಾದನೆ ಆಗುತ್ತಾ ಬಂದಿಗೆ. ಅದನ್ನು ಈಗ ಜಾಸ್ತಿ ಮಾಡಬೇಕಾದರೆ ಈಗ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ ಎಂದರೆ ತಪ್ಪಾಗಲಾರದು. ಈಗ ಇಲ್ಲಿ ನಮೂದು ಮಾಡಿರುವ ಪ್ರಕಾರ ನಾಲ್ಕು ಥೈರ್ಮಲ್ ಪ್ರಾಜೆಕ್ಟ್‌ಗಳನ್ನು ಹಾಕಬೇಕೆಂದು ಬಜೆಟ್‌ನಲ್ಲಿ ಇದೆ. 3 ಥರ್ಮಲ್ ಪ್ರಾಜೆಕ್ಟ್‌ಗಳನ್ನು ಹೊಸದಾಗಿ ಮಾಡಬೇಕೆಂಬ ಉದ್ದೇಶ ಇದೆ. 4 ಡೀಸಲ್ ಪವರ್ ಸ್ಟೇಷನ್‌ಗಳನ್ನು ಮಾಡುವ ಉದ್ದೇಶ ಇದೆ. ಈ ಎಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ವಿದ್ಯುಚ್ಛಕ್ತಿಗೆ ಮೊದಲನೆಯ ಸ್ಥಾನವನ್ನು ಕೊಟ್ಟಿದ್ದೇವೆ ಎನ್ನುವುದಕ್ಕೆ ನಾನು ಇಷ್ಟಪಡುತ್ತೇನೆ. ಆದ್ದರಿಂದ ಸುಮಾನು 495.57 ಕೋಟಿ ರೂಪಾಯಿಗಳನ್ನು ವಿದ್ಯುತ್‌ಗೆ ಕೊಟ್ಟಿದ್ದೇವೆ. ಇನ್ನು ವಿಶೇಷವೆಂದರೆ, ನೀರಾವರಿ ಕಾಮಗಾರಿ ಹಾಗೂ ಪ್ರವಾಹ ನಿಯಂತ್ರಣ. ನೀರಾವರಿ ಎಷ್ಟು ಮುಖ್ಯ ಎಂದರೆ, ಅಗೂ ಕಾವೇರಿ ನೀರಿನ ವಿವಾದ ಬಂದಮೇಲೆ ನೀರಿನ ಪ್ರಾಮುಖ್ಯತೆ ಎಷ್ಟು ಎಂಬುದು ಕರ್ನಾಟಕ ರಾಜ್ಯದ ಪ್ರತಿಯೊಬ್ಬರಿಗೂ ಗೊತ್ತಾಗಿದೆ. ಇದು ಸರ್ಕಾರಕ್ಕೆ ಕೂಡ ಮನವಟ್ಟಾಗಿದೆ ನಂದು ತಿಳಿದುಕೊಂಡಿದ್ದೇನೆ. ಈ ನೀರಾವರಿ ಬಗ್ಗೆ ನಾವು ಹೊವಲೇ ಸುಮಾರು 10-20 ವರ್ಷಗಳಿಂದ ಬಹಳ ಗಮನ ಹರಿಸಿದ್ದರೆ ನಾವು ಇಂತಹ ಒಂದು ಸ್ಥಿತಿಗೆ ತಲುಪುತ್ತಾ ಇರಲಿಲ್ಲ. ಇವತ್ತಿನ ದಿವಸ ಬಹಳ ಚಿಂತನೆ ಮಾಡಿ ಆರ್ಥಿಕ ವ್ಯವಸ್ಥೆಯಲ್ಲಿ ಬಹಳ ಕಷ್ಟ ಇದ್ದರೂ ಕೂಡ ಇವತ್ತು ಇದಕ್ಕೆ 2ನೇ ಸ್ಥಾನವನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಇವತ್ತು ಮಾಡಿನೆ ಎನ್ನುವುದರಲ್ಲಿ ಯಾವ ಅನುಮಾನ ಇಲ್ಲ ಎಂದು ಅನ್ನಿಸುತ್ತದೆ. ಏನು ನಾವು 30.48 ಲಕ್ಷ ಹೆಕ್ಟೇರನ್ನು ನೀರಾವರಿಯನ್ನಾಗಿ ಮಾಡುವುದಕ್ಕೆ ಮತ್ತೆ 31.48 ಲಕ್ಷ ಎಕರೆಯನ್ನು ಮಾಡತಕ್ಕ ಅಂದಾಜು ಇಟ್ಟುಕೊಂಡಿದ್ದೇವೋ ಅದನ್ನು ನಾವು ಮಾಡಬೇಕಾದರೆ ಅದಕ್ಕೆ ಹಣವನ್ನು